ISBN : 978-93-83813-43-8

ಕೆ.ಎಲ್.ಇ. ಸಂಸ್ಥೆಯ ಎಸ್.ಕೆ. ಕಲಾ ಮಹಾವಿದ್ಯಾಲಯ ಮತ್ತು
ಎಚ್. ಎಸ್. ಕೆ. ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ

# ಸ್ವಾತಂತ್ರ್ಯ ಚಳುವಳಿ
## ಮತ್ತು
# ಕನ್ನಡ ಸಾಹಿತ್ಯ

**Swaatantrya Chaluvali & Kannada Saahitya..**

**(Papers Presented in International Seminar)**



ಸಂಪಾದಕರು

ಡಾ. ವಿದ್ಯಾವತಿ ರಜಪೂತ
ಪ್ರೊ. ಬಿ. ಬಿ. ಡೆಂಗನವರ
ಡಾ. ಆರ್. ವಿ. ಪಾಟೀಲ
ಡಾ. ಎಸ್. ಟಿ. ಮೇರವಾಡೆ
ಡಾ. ಎಂ. ಎಸ್. ಮಾಗಣಗೇರಿ

14. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸ್ವಾತಂತ್ರ್ಯ ಹೋರಾಟಗಾರ್ತಿ/ಗಾರರ ಕೊಡುಗೆ. 59

• ಡಾ. ಶಾಕೀರಾ ಖಾನಂ

15. ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಗೆ ಬೆಳಗಾವಿ ಜಿಲ್ಲೆಯ ಕೊಡುಗೆ 63

• ಪ್ರೊ. ಮಲಕೇಶಿ ಧೀ. ಕಾಮಣ್ಣವರ

16. ಕುವೆಂಪುರವರ "ಶ್ರೀಮಾನ್ಯಕ್ಕನಾಗಿತ್ತು" ಕಥೆಯಲ್ಲಿ ಚಿತ್ರಿತವಾದ ಪ್ರಾಣಿಪಕ್ಷಿಗಳು 67

• ಸೋಮನಗೌಡ ಭೀಮನಗೌಡ್ರ

17. ಸ್ವಾತಂತ್ರ ಸಂಗ್ರಾಮದಲ್ಲಿ ಸಾಹಿತ್ಯದ ಕೊಡುಗೆ 71

• ಡಾ. ನಾಗಭೂಷಣ ಪರಮೇಶ್ವರಯ್ಯ ವಿ.

18. ಸ್ವಾತಂತ್ರ್ಯ ಸಂದರ್ಭದಲ್ಲಿ ಪತ್ರಿಕೆಗಳ ಸ್ಥಿತಿ–ಗತಿ 76

• ಡಾ. ಎಂ. ಎಸ್. ಮಾಗಣಗೇರಿ

19. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಹಿತ್ಯದ ಕೊಡುಗೆ 82

• ಅನಿತಾ ಟಿ. ಎಂ.

20. ಭಾರತದ ಸ್ವಾತಂತ್ರ ಹೋರಾಟ ಮತ್ತು ಬಾಗಲಕೋಟ ಜಿಲ್ಲೆ 86

• ಪ್ರೊ. ಎಸ್.ಆರ್.ನಾಗಣ್ಣವರ.

21. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾಹಿತ್ಯದ ಕೊಡುಗೆ 92

• ಪ್ರೊ. ಜಿ. ಜಿ. ಹಿರೇಮಠ

22. ರಾಷ್ಟ್ರೀಯ ಸ್ವಾತಂತ್ರ್ಯ ಚಳುವಳಿಗೆ ಹಾವೇರಿ ಜಿಲ್ಲೆಯ ಕೊಡುಗೆ 97

• ಡಾ. ಸುರೇಶ ದೊಡ್ಡಮನಿ

23. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಉದ್ದೀಪಕ ಶಕ್ತಿಯಾಗಿ ಲಾವಣಿಗಳು ಮತ್ತು ಆಧುನಿಕ ಕನ್ನಡ ಸಾಹಿತ್ಯ 102

• ಪರಮೇಶ್ವರಯ್ಯ ವಿ.

24. ಕನ್ನಡ ಸಾಹಿತ್ಯದಲ್ಲಿ ಸ್ವಾತಂತ್ರ್ಯ ಚಳುವಳಿ 106

• ಡಾ. ತಿಪ್ಪೇಸ್ವಾಮಿ ಡಿ. ಎಸ್.

25. ಸಂಘಟನಾ ಚತುರ – ವೀರ ಸಾವರ್ಕರ 110

• ಡಾ. ಎಚ್. ಎಮ್. ಚನ್ನಪ್ಪಗೋಳ

# ಸ್ವಾತಂತ್ರ್ಯ ಸಂದರ್ಭದಲ್ಲಿ ಪತ್ರಿಕೆಗಳ ಸ್ಥಿತಿ-ಗತಿ

● ಡಾ. ಎಂ. ಎಸ್. ಮಾಗಣಗೇರಿ

ಪತ್ರಿಕೆಗಳು ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿರುವ ಪಾತ್ರ ಉಜ್ವಲವಾದದ್ದು. ಅವು ರಾಷ್ಟ್ರೀಯ ಚಳುವಳಿಯ ಸಕಲ ಮುಖಗಳಲ್ಲಿಯೂ ಹಾಸುಹೊಕ್ಕಾಗಿವೆ. ಆದರೆ ಹತ್ತಾರು ಭಾಷೆಗಳ ಹಾಗೂ ಹದಿನೈದು ದಶಕಗಳ ಕಾಲ ವ್ಯಾಪ್ತಿಯ ಪತ್ರಿಕೆಗಳ ಪ್ರಪಂಚ ಅಪಾರ. ಒಂದೊಂದು ಭಾಷೆ, ಒಂದೊಂದು ಪ್ರದೇಶ, ಒಂದೊಂದು ಕಾಲಾವಧಿ ಹೀಗೆ ಮಿತವಾದ ಅಧ್ಯಯನಗಳು ಪಾತ್ರ ಫಲಕಾರಿಯಾಗಬಲ್ಲವು. ನವಜಾಗೃತಿಯ ಪರಿಣಾಮವಾಗಿ ಭಾರತೀಯ ಭಾಷೆಗಳ ಬೆಳವಣಿಗೆ ಹೊಸ ದಾರಿ ಹಿಡಿಯಿತು. 18ನೆಯ ಶತಮಾನದವರೆಗೆ ನಮ್ಮ ಭಾಷೆಗಳಲ್ಲಿ ಪದ್ಯರೂಪದಲ್ಲಿ ಮಾತ್ರ ಪ್ರಮುಖ ಸಾಹಿತ್ಯಿಕ ಕಾರ್ಯ ನಡೆಯುತ್ತಿತ್ತು. ವಸ್ತುವಿನ ದೃಷ್ಟಿಯಿಂದ ಮತ ವಸ್ತುಗಳು, ಪುರಾಣ ಕತೆಗಳು, ನೀತಿ ಸಾಹಿತ್ಯ ಇವೇ ವಿಪುಲವಾಗಿದ್ದವು. ಬರವಣಿಗೆಯಲ್ಲಿ ತೊಡಗಿದವರು ರಾಜಾಶ್ರಯ ಇಲ್ಲವೇ ಶ್ರೀಮಂತರ ಆಶ್ರಯ ಕೋರಬೇಕಾಗಿತ್ತು. ನವಜಾಗೃತಿ ಇವನ್ನೆಲ್ಲ ಮಾರ್ಪಡಿಸಿತು. ಈ ಮಾರ್ಪಾಡಿಗೆ ಅತ್ಯಂತ ಮುಖ್ಯ ಕಾರಣವೆಂದರೆ ಮುದ್ರಣ. ಭಾರತೀಯ ಭಾಷೆಗಳೆಲ್ಲ ಅಚ್ಚಿನ ಮೊಳೆ, ಮುದ್ರಣ ಯಂತ್ರಗಳ ಸೌಕರ್ಯವನ್ನು ಗಳಿಸಿಕೊಂಡವು. ಕ್ರೈಸ್ತಧರ್ಮ ಪ್ರಸಾರಕ್ಕಾಗಿ ದೇಶ ಭಾಷೆಗಳ ಅಧ್ಯಯನ ಆರಂಭಿಸಿದ ಮಿಷನರಿಗಳು ನಮ್ಮ ಭಾಷೆಗಳಿಗೆ ಕೆಲವು ಮೂಲ ಪರಿಕರಗಳನ್ನು ಒದಗಿಸಿಕೊಟ್ಟರು. ಅಕಾರಾದಿಯಾದ ನಿಘಂಟುಗಳು, ವ್ಯಾಕರಣ, ಹಳೆಯ ಗ್ರಂಥಗಳ ಸಂಪಾದನ ಕ್ರಮ ಇವೆಲ್ಲ ಒದಗಿ ಬಂದವು. ಇವೆಲ್ಲ ನಮ್ಮ ಭಾಷೆಗಳಿಗೆ ಚೈತನ್ಯ ನೀಡಿದ್ದು ಮಾತ್ರವಲ್ಲದೆ ಬರವಣಿಗೆಯ ಮಟ್ಟಿಗಾದರೂ ಒಂದೊಂದು ಭಾಷೆಯೂ ಸಾಮಾನ್ಯ ಶೈಲಿ, ರೂಪಗಳತ್ತ ಸಾಗುವಂತೆ ಮಾಡಿದವು.

ಆಧುನಿಕ ವಿಚಾರಗಳನ್ನು ಪದ್ಯರೂಪಕ್ಕೆ ಅಳವಡಿಸುವುದು ಕಷ್ಟ. ಹಿಂದೆ ಮುದ್ರಣ ಸೌಕರ್ಯವಿಲ್ಲದಿದ್ದಾಗ ಬಾಯಿಪಾಠ ಮಾಡಲು ಸರಳ ಪದ್ಯರೂಪಗಳು ಅನುಕೂಲವಾಗಿದ್ದುವು. ಈಗ ವಸ್ತು ವಿಚಾರ ಗದ್ಯರೂಪಕ್ಕೆ ಹೊಂದಿಕೊಳ್ಳುವಂತಹುದು. ಅದನ್ನು ಬಾಯಿಪಾಠ ಮಾಡುವ ಅಗತ್ಯ ಮುದ್ರಣದಿಂದ ತಪ್ಪಿತು. ನಮ್ಮ ಭಾಷೆಗಳ ಮೇಲೆ ನವಜಾಗೃತಿ ಮಾಡಿದ ಪರಿಣಾಮಗಳಲ್ಲಿ ಗದ್ಯ ರೂಪದ ಪರಿಷ್ಕರಣವೇ

**ಜ್ಞಾನದ ಬಲದಿಂದ ಅಜ್ಞಾನದ ಕೇಡ ನೋಡಯ್ಯ**
**ಜ್ಯೋತಿಯ ಬಲದಿಂದ ತಮಂಧದ ಕೇಡ ನೋಡಯ್ಯ**
**ಸತ್ಯದ ಬಲದಿಂದ ಅಸತ್ಯದ ಕೇಡ ನೋಡಯ್ಯ**
**ಪರುಷದ ಬಲದಿಂದ ಅವಲೋಹದ ಕೇಡ ನೋಡಯ್ಯ**
**ಕೂಡಲ ಸಂಗನ ಶರಣರ ಅನುಭಾವದಿಂದ ಎನ್ನ ಭವದ ಕೇಡ ನೋಡಯ್ಯ**

ಎಂಬ ವಿಶ್ವಗುರು ಬಸವಣ್ಣನವರ ನುಡಿಯಂತೆ ಜ್ಞಾನದ ಬಲದಿಂದ ಅಜ್ಞಾನವನ್ನು ಬೇರು ಸಮೇತ ಕಿತ್ತು ಬಾಳಿನಲ್ಲಿ ಜ್ಯೋತಿ ಮೂಡಿಸಲು ಶಿಕ್ಷಣ ದಾಸೋಹಕ್ಕೆ ಅಣಿಯಾಗಿ ನಿಂತ ಪ್ರಪ್ರಥಮ ಸಂಸ್ಥೆ ಕೆ.ಎಲ್.ಇ ಸಂಸ್ಥೆ. ಕರ್ನಾಟಕದ ಶಿಕ್ಷಣ ರಂಗದ ಜೀವನಾಡಿಯಾಗಿ ಸ್ಥಾಪಿತಗೊಂಡ ಈ ಸಂಸ್ಥೆಯ ಸ್ಥಾಪನೆಯ ಕಥೆಯು ರೋಮಾಂಚನ ಕಾರಿಯಾಗಿದೆ. ಒಂದು ಜನಾಂಗದ ಸೇವಾ ಭಾವ, ಸಾಹಸ ಪ್ರವೃತ್ತಿ, ತ್ಯಾಗಗಳ ಬೆವರಿನ ಕಥೆ, ಋಷಿಸದೃಶ್ಯ ಜೀವನ ನಡೆಸಿದ ಸಪ್ತ ಋಷಿಗಳ ಯಶೋಗಾಥೆಯ ಪ್ರತೀಕವೇ ಈ ಶಿಕ್ಷಣ ಸಂಸ್ಥೆ. ಇಂದು ವಿಶ್ವದಾದ್ಯಂತ ಹೆಮ್ಮರವಾಗಿ ಬೆಳೆದು ಶಿಕ್ಷಣ ಪ್ರಸಾರ ಮಾಡುತ್ತಿದೆ. ವಿಶ್ವದ ಮೂಲೆ ಮೂಲೆಗಳಲ್ಲಿಯೂ ಕೆ.ಎಲ್.ಇ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಮೆರೆಯುತ್ತಿದ್ದಾರೆ. ಇಂಥ ಪ್ರತಿಷ್ಠಿತ ಕೆ.ಎಲ್.ಇ ಸಂಸ್ಥೆಯ ಶ್ರೀ ಕಾಡಸಿದ್ದೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್.ಕೆ ವಿಜ್ಞಾನ ಸಂಸ್ಥೆ ಹುಬ್ಬಳ್ಳಿಯಲ್ಲಿ ಸೆಪ್ಟೆಂಬರ್ 7 ಮತ್ತು 8 ರಂದು 2 ದಿನಗಳ **"ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರಾಷ್ಟ್ರೀಯತೆ, ಪತ್ರಿಕೋದ್ಯಮ ಹಾಗೂ ಸಾಹಿತ್ಯದ ಪಾತ್ರ"** ಕುರಿತು ಅಂತರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಿದ್ದು, ಈ ವಿಚಾರ ಸಂಕಿರಣದಲ್ಲಿ ವಿಭಿನ್ನ ಚರ್ಚೆಗಳ, ಪರಿಶೀಲನೆಗಳ ಅಭ್ಯಾಸ ಪೂರ್ಣ ಸಂಪ್ರಬಂಧಗಳನ್ನು ಒಳಗೊಂಡ ಕನ್ನಡ, ಹಿಂದಿ, ಇಂಗ್ಲೀಷ್, ಮರಾಠಿ ಮತ್ತು ಉರ್ದು ಭಾಷೆಗಳಲ್ಲಿ ಕೃತಿಗಳು ಪ್ರಕಟವಾಗುತ್ತಿರುವುದು ಸಂತೋಷದ ಸಂಗತಿ. ಇಂತಹ ಕಾರ್ಯದಲ್ಲಿ ಪಾಲ್ಗೊಂಡಿರುವ ಸಂಯೋಜಕರಿಗೂ, ಸಂಪಾದಕರಿಗೂ ಮತ್ತು ಪ್ರಾಧ್ಯಾಪಕರಿಗೂ ಅಭಿನಂದನೆಗಳು.

ಡಾ. ಪ್ರಭಾಕರ ಕೋರೆ
ಮಾನ್ಯ ಲೋಕಸಭಾ ಸದಸ್ಯರು,
ಕಾರ್ಯಾಧ್ಯಕ್ಷರು,
ಕೆ.ಎಲ್.ಇ ಸಂಸ್ಥೆ, ಬೆಳಗಾವಿ

978-93-83813-43-8
ISBN : 978-93-83813-43-8
ಸೌಮ್ಯ ಪ್ರಕಾಶನ, ವಿಜಯಪುರ

